## 2016 ಕ.ತೀ.ವ. 981

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಶೋಕ್ ಬಿ. ಹಿಂಚಿಗೇರಿ

### ವ್ಯವಸ್ಥಾಪಕರು, ಬಜಾಜ್ ಅಲೈಯನ್ಸ್ ಜನರಲ್ ಇನ್ಸುರೆನ್ಸ್ –ವಿರುದ್ಧ– ಭೀಮರಾಜ್ ಮತ್ತು ಮತ್ತೊಬ್ಬರು *

ಮೋಟಾರು ವಾಹನಗಳ ಅಧಿನಿಯಮ, 1988ರ 173(1)ನೇ ಪ್ರಕರಣ.

ಅಪಘಾತ ಕ್ಲೇಮು – ತೀರ್ಪು ಮತ್ತು ಐತೀರ್ಪು – ವಾಹನದ ಮಾಲೀಕ ಮತ್ತು ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆ – ವಾಹನವನ್ನು ಕದ್ದ ವ್ಯಕ್ತಿಯಿಂದ ಅಪಘಾತ ಸಂಭವಿಸಿದೆಯೆಂದು ವಿಮಾ ಕಂಪನಿಯು ಕ್ಲೇಮನ್ನು ನೀಡಲು ನಿರಾಕರಿಸಿದೆ – ವಾಹನವು ಕಳುವಾದ ಪ್ರಕರಣದಲ್ಲಿ ವಿಮಾ ಪಾಲಿಸಿಯ ಷರತ್ತುಗಳನ್ನು ಉಲ್ಲಂಘಿಸಲಾಗದು. ವಾಹನವು ಕಳುವಾಗಿದೆಯೆಂಬ ಕಾರಣದಿಂದ ವಿಮಾ ಕಂಪನಿಯು ನಷ್ಟದ ಕ್ಲೇಮನ್ನು ನಿರಾಕರಿಸಲು ಬರುವುದಿಲ್ಲ. ಅಪೀಲುದಾರ ವಿಮಾ ಕಂಪನಿಯು, ವಿಮೆ ಪಾಲಿಸಿಯನ್ನು ಪಡೆದುಕೊಂಡಿರುವ ವಿಮಾದಾರನಿಗೆ ನಷ್ಟವನ್ನು ತುಂಬಿಕೊಡುವುದಕ್ಕೆ ಹೊಣೆಯಾಗಿರುತ್ತದೆ. (17ನೇ ಕಂಡಿಕೆ)

ಮಾಲೀಕನು ಪರವಾನಗಿ ಇಲ್ಲದ ವ್ಯಕ್ತಿಯು ವಾಹನ ನಡೆಸಲು ಕೊಟ್ಟಿದ್ದನೆಂಬುದು ಯಾರ ವಾದವೂ ಆಗಿಲ್ಲ. ಕಳ್ಳನು ವಾಹನವನ್ನು ಎತ್ತಿಕೊಂಡು ಹೋದ ಮೇಲೆ, ಮಾಲೀಕನು ಕೂಡಲೇ ಪೋಲೀಸರಿಗೆ ಪ್ರಾಮಾಣಿಕವಾಗಿ ದೂರು ಕೊಟ್ಟಿದ್ದಾನೆ. ಮಾಲೀಕನು, ವಿಮಾ ಪಾಲಿಸಿಯ (ನಿಶಾನೆ.ಆರ್7) ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿಲ್ಲ.

ಕಂಪನಿಯ ಕೆಲಸ ವಿಮೆ ಮಾಡುವುದಾಗಿದೆ. ಎಲ್ಲಾ ವ್ಯವಹಾರಗಳಲ್ಲಿ ನಷ್ಟದ ಅಂಶವಿರುತ್ತದೆ. ಸದರಿ ಅಧಿನಿಯಮದ 149(2)(ಎ)(ii)ನೇ ಪ್ರಕರಣದ ಮೇರೆಗಿನ ಜವಾಬ್ದಾರಿಯನ್ನು

* ಎಂ.ಎಫ್.ಎ. ಸಂ. 10685/2013, (ಎಂ.ವಿ.) ಇದರೊಂದಿಗೆ, ಎಂ.ಎಫ್.ಎ. ಸಂ. 878/2014, ದಿನಾಂಕ: 22ನೇ ಜುಲೈ, 2015.

ತಪ್ಪಿಸಿಕೊಳ್ಳುವ ಸಲುವಾಗಿ ವಿಮಾದಾರನ ಕಡೆಯಿಂದ ನಿಯುಮದ ಉಲ್ಲಂಘನೆಯಾಗಿತ್ತೆಂದು ತೋರಿಸಲೇಬೇಕಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಅದರ ಫಲಿತಾಂಶ ಅಸಂಬದ್ಧವಾಗುತ್ತದೆ. ಮೂರನೇ ಪಕ್ಷಕಾರನ ನಷ್ಟಕ್ಕೆ ಸಂಬಂಧಿಸಿದ ಉಪಬಂಧದ ಗುರಿ ಮತ್ತು ಉದ್ದೇಶವು, ವಿಮಾ ಕಂಪೆನಿಯು, ನಷ್ಟಪರಿಹಾರವನ್ನು ಸಂದಾಯ ಮಾಡಲು ಅವಕಾಶ ಕಲ್ಪಿಸುವುದಾಗಿದೆ.

ಮಾಲೀಕ ಮತ್ತು ವಿಮಾ ಕಂಪನಿಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಯಾಗಿವೆಯೆಂದು ಅಭಿಪ್ರಾಯಪಟ್ಟಿರುವುದನ್ನು ನ್ಯಾಯಾಧಿಕರಣವು ಸಂಪೂರ್ಣವಾಗಿ ಸಮರ್ಥಿಸಿಕೊಂಡಿರುವುದನ್ನು ಜಾರಿಗೆ ತರಬೇಕೆಂದು ನಾನು ಮೊದಲ ಪ್ರಶ್ನೆಗೆ ಉತ್ತರ ನೀಡಿರುತ್ತೇನೆ. ವಿಮಾ ಕಂಪನಿಯು, ಅಪಘಾತಕ್ಕೆ ಕಾರಣವಾಗಿರುವ ವ್ಯಕ್ತಿಯಿಂದ ಮೊತ್ತವನ್ನು ವಸೂಲಿ ಮಾಡುವ ಸ್ವಾತಂತ್ರ್ಯವನ್ನು ಹೊಂದಿದೆಯೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟು ಉಚ್ಚ ನ್ಯಾಯಾಲಯವು ಮೊದಲ ಸಂಕೀರ್ಣ ಅಪೀಲುಗಳನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. 1966 ಎಐಆರ್ 1697*<br>*ಸೀತಾರಾಮ್ ಮೋತಿಲಾಲ್ ಕಲಾಲ್ –ವಿರುದ್ಧ–*<br>*ಸಂತನುಪ್ರಸಾದ್ ಜೈಶಂಕರ್ ಭಟ್* | *(ಉಲ್ಲೇ) 6* |
| *2. 2008, ಎಸಿಜೆ 2035*<br>*ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ –ವಿರುದ್ಧ–*<br>*ನಿತಿನ್ ಖಂಡೇಲ್‌ವಾಲ್* | *(ಉಲ್ಲೇ) 7* |
| *3. 2010 ಎಸಿಜೆ 1061*<br>*ಶಶಿಧರನ್ ನಾಯರ್ –ವಿರುದ್ಧ–*<br>*ಅಲಿ ಮತ್ತು ಇತರರು* | *(ಉಲ್ಲೇ) 8* |

4. *(2003)3 ಎಸ್‌ಸಿಸಿ 338*
*ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂ-ನಿಯಮಿತ*
*-ವಿರುದ್ಧ- ಲೆಹ್ರು ಮತ್ತು ಇತರರು (ಉಲ್ಲೇ) 9*

5. *(1987) 2 ಎಸ್‌ಸಿಸಿ 654*
*ಸ್ಕ್ಯಾಂಡಿಯಾ ಇನ್ಸುರೆನ್ಸ್ ಕಂಪನಿ ನಿಯಮಿತ -ವಿರುದ್ಧ-*
*ಕೋಕಿಲಾಬೆನ್ ಚಂದ್ರವದನ್ ಮತ್ತು ಇತರರು (ಉಲ್ಲೇ) 20*

**ಎಂ.ಎಫ್.ಎ. ಸಂ. 10685/2013:**

ಅಪೀಲುದಾರರ ಪರ : ಶ್ರೀ ಓ. ಮಹೇಶ್ ವಕೀಲರು

1ನೇ ಪ್ರತ್ಯಪಿಲುದಾರರ ಪರ : ಶ್ರೀ ಸಿ. ರಾಮಕೃಷ್ಣ, ವಕೀಲರು ಇವರ ಪರವಾಗಿ ಶ್ರೀ ಕೆ.ಟಿ. ಗುರುದೇವ ಪ್ರಸಾದ್,

2ನೇ ಪ್ರತ್ಯಪೀಲುದಾರರ ಪರ: ಶ್ರೀ ಜೆ. ಪ್ರಮೋದ್, ವಕೀಲರು

**ಎಂ.ಎಫ್.ಎ. ಸಂ. 878/2014:**

ಅಪೀಲುದಾರರ ಪರ: ಶ್ರೀ ಸಿ. ರಾಮಕೃಷ್ಣ, ವಕೀಲರು ಇವರ ಪರವಾಗಿ ಶ್ರೀ ಕೆ.ಟಿ. ಗುರುಪ್ರಸಾದ್, ವಕೀಲರು;

1ನೇ ಪ್ರತ್ಯಪೀಲುದಾರರ ಪರ: ಶ್ರೀ ಜೆ. ಪ್ರಮೋದ್, ವಕೀಲರು,

2ನೇ ಪ್ರತ್ಯಪೀಲುದಾರರ ಪರ: ಶ್ರೀ ಓ. ಮಹೇಶ್, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಅಶೋಕ ಬಿ. ಹಿಂಚಿಗೇರಿ :**

ಈ ಎರಡೂ ಅಪೀಲುಗಳನ್ನು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಬೆಂಗಳೂರು, ಎಂ.ವಿ.ಸಿ. ಸಂಖ್ಯೆ 2528/2011ರಲ್ಲಿ ನೀಡಿದ ದಿನಾಂಕ 20.9.2013ರ ತೀರ್ಪಿನಿಂದ ಹೂಡಲಾಗಿದೆ.

2. ಎಂ.ವಿ.ಸಿ. ಸಂ.10685/2013ನ್ನು ವಿಮಾ ಕಂಪನಿಯು, ಮೋಟಾರು ಸೈಕಲ್ಲನ್ನು ಕದ್ದ ಯಾರೋ ಒಬ್ಬ ವ್ಯಕ್ತಿಯಿಂದ ಅಪಘಾತವು ಸಂಭವಿಸಿರುವುದರಿಂದ ತಾನು ನಷ್ಟ ಪರಿಹಾರವನ್ನು ನೀಡಲು ಹೊಣೆಗಾರನಾಗುವುದಿಲ್ಲವೆಂಬ ಆಧಾರದ ಮೇಲೆ ಅಪೀಲನ್ನು ಸಲ್ಲಿಸಿದೆ. ಕ್ಲೇಮುದಾರನು ತಾನು ನಷ್ಟಪರಿಹಾರ ಹೆಚ್ಚಳವನ್ನು ಕೋರಿ ಎಂ.ಎಫ್.ಎ.ಸಂ.878/2014ನ್ನು ಸಲ್ಲಿಸಿದ್ದಾನೆ.

3. ನ್ಯಾಯಾಧಿಕರಣವು 1,35,685 ರೂ.ಗಳನ್ನು ನೀಡಿದ್ದು ಅದರ ವಿಂಗಡಣೆಯು ಈ ಮುಂದಿನಂತಿದೆ:

| ಕ್ರಮ ಸಂಖ್ಯೆ | | ಮೊತ್ತ (ರೂ.ಗಳು) |
|---|---|---|
| 1. | ಅಂಗವಿಕಲತೆಯ ಕಾರಣದಿಂದ ಆದ ಭವಿಷ್ಯದ ನಷ್ಟ | 43,740–00 |
| 2. | ಜೀವನದಲ್ಲಿನ ಸವಲತ್ತು, ಸಂತೋಷದ ನಷ್ಟ ಮತ್ತು ಆಶಾಭಂಗ | 15,000–00 |
| 3. | ಜೀವನ ಸಾಗಣೆ, ಅನುವರ್ತಿ ವೆಚ್ಚ, ಆಹಾರ ಮತ್ತು ಆರೈಕೆ | 10,000–00 |
| 4. | ನೋವು ಮತ್ತು ಸಂಕಷ್ಟ | 35,000–00 |
| 5. | ತಿಳಿಸಲಾದ ಅವಧಿಯಲ್ಲಿ ಅದ ಆದಾಯದ ನಷ್ಟ | 18,000–00 |
| 6. | ವೈದ್ಯಕೀಯ ವೆಚ್ಚ | 13,945–00 |
| | ಒಟ್ಟು | 1,35,685–00 |

4. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಓ. ಮಹೇಶ್‌ರವರು ವಿಮಾ ಕಂಪನಿ, ಎಂ.ಎಫ್.ಎ. ಸಂ.10685/2013ರಲ್ಲಿ ಅವರು, ಪ್ರಶ್ನಿತ ಮೋಟಾರು ಸೈಕಲ್ಲನ್ನು, ಅದರ ಮಾಲೀಕರಿಂದ ಕದ್ದಿದ್ದರೆಂಬುದರಲ್ಲಿ ಯಾವುದೇ ವಿವಾದವಿಲ್ಲವೆಂದು ನಿವೇದಿಸಿದ್ದಾರೆ. ಕಳ್ಳನು ಮಾಡಿರುವ ಕಳ್ಳತನಕ್ಕೆ ಮಾಲೀಕನೇ ಹೊಣೆಯಾಗಿಲ್ಲದಿರುವಾಗ, ವಿಮಾ ಕಂಪನಿಯೂ ಸಹ ಹೊಣೆಗಾರನಾಗಲು ಸಾಧ್ಯವಾಗುವುದಿಲ್ಲವೆಂದು ನಿವೇದಿಸಿದ್ದಾರೆ. ಅವರು ಮೋಟಾರು ವಾಹನಗಳ ಅಧಿನಿಯಮ, 1988ರ 168ನೇ ಪ್ರಕರಣದ ಪ್ರಕಾರ, ನ್ಯಾಯಾಧಿಕರಣದ ಮುಂದೆ ನಡೆಯುವ ಕ್ಲೇಮು ವ್ಯವಹರಣೆಗಳಿಗೆ ಚಾಲಕನನ್ನು ಪಕ್ಷಕಾರನನ್ನಾಗಿ ಮಾಡಬೇಕೆಂದು ನಿವೇದಿಸಿದ್ದಾರೆ. ಪೊಲೀಸರು ಕ್ರಿಮಿನಲ್ ಪ್ರಕರಣದಲ್ಲಿ 'ಸಿ' ವರದಿಯನ್ನು ಸಲ್ಲಿಸಿರುವರು. ಅವರು, ಈ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಸದರಿ ಅಧಿನಿಯಮದ 163ನೇ ಪ್ರಕರಣದ ಮೇರೆಗೆ ಉಪಬಂಧಿಸಲಾದ ಹಾಗೆ ಅಪಘಾತವನ್ನು ಮಾಡಿ ಡಿಕ್ಕಿ ಹೊಡೆದು ಪರಾರಿಯಾದ ಪ್ರಕರಣವೆಂದು ಪರಿಭಾವಿಸಿ ನಷ್ಟ ಪರಿಹಾರವನ್ನು ಕ್ಲೇಮು ಮಾಡುವುದು ಕ್ಲೇಮುದಾರರ ಪರಿಹಾರವಾಗಿದೆಯೆಂದು ಅವರು ನಿವೇದಿಸಿದ್ದಾರೆ.

5. ಅವರು, ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989ರ 235ನೇ ನಿಯಮದ ಮೇರೆಗೆ, ನ್ಯಾಯಾಧಿಕರಣವು, ನೋಟೀಸಿನಲ್ಲಿ ವಾಹನದ ಮಾಲೀಕ ಮತ್ತು ಚಾಲಕರಿಬ್ಬರನ್ನು ಸೇರಿಸಿದೆ. ಖಾಸಗಿ ತಕ್ಸೀರುಗಾರನು (ಮೋಟಾರು ಸೈಕಲ್‌ನ ಸವಾರ) ಇಲ್ಲದಿರುವಾಗ, ಕ್ಲೇಮು ಅರ್ಜಿಯನ್ನು ತಿರಸ್ಕರಿಸಲೇಬೇಕಾಗುತ್ತದೆಂದು ನಿವೇದಿಸಿದ್ದಾರೆ. ಅವರು, ಪೊಲೀಸು ದಾಖಲೆಗಳಲ್ಲಿ ದ್ವಂದ್ವ ಮತ್ತು ಅಸಂಗತತೆಗಳು ಎದ್ದು ಕಾಣುತ್ತಿವೆಯೆಂದು ನಿವೇದಿಸಿದ್ದಾರೆ. ಕೆಲವು ದಾಖಲೆಗಳು ವಾಹನವು ಸ್ಥಳದಲ್ಲೆ ಬಿಟ್ಟುಬಿಡಲಾಗಿತ್ತೆಂದು, ಇತರ ದಾಖಲೆಗಳು ಇನ್ನೇನನ್ನೋ ತೋರಿಸುತ್ತವೆಯೆಂಬುದು ತಿಳಿದುಬರುತ್ತದೆ. ಮಹಜರು ಸಾಕ್ಷಿದಾರರನ್ನು ನ್ಯಾಯಾಧಿಕರಣದ ಮುಂದೆ ಪರಿಶೀಲಿಸಿಲ್ಲವೆಂದೂ ಸಹ ಅವರು ನಿವೇದಿಸಿದ್ದಾರೆ. ಅವರು ವಾಹನವನ್ನು ಪರಿಶೀಲಿಸುವುದರಲ್ಲಿ ಹಾಗೂ

ಜಖಂಗೊಂಡಿರುವುದನ್ನು ನಿರ್ಧರಿಸುವಲ್ಲಿ ವಿಳಂಬವಾಗಿರುವುದನ್ನು ಸಹ ಅವರು ದೂರಿದ್ದಾರೆ.

6. ***ಸೀತಾರಾಮ್ ಮೋತಿಲಾಲ್ ಕಲಾಲ್ –ವಿರುದ್ಧ– ಸಂತನುಪ್ರಸಾದ್ ಜೈಶಂಕರ್ ಭಟ್*** [1]**,** ಪ್ರಕರಣದಲ್ಲಿ, ಮಾಲೀಕನ ಹೊಣೆಗಾರಿಕೆ ಉದ್ಭವಿಸಲು ಮಾಲೀಕನು ಅಧಿಕೃತಗೊಳಿಸಿದ ಕ್ರಮ ದೋಷಯುಕ್ತವಾಗಿರಬೇಕು ಅಥವಾ ಮಾಲೀಕನು ಅಧಿಕೃತಗೊಳಿಸಿದ ಯಾವುದೋ ಕೃತ್ಯ ದೋಷಯುಕ್ತವಾಗಿರಬೇಕು ಮತ್ತು ಅನಧಿಕೃತವಾಗಿರಬೇಕು ಎಂದು ಇಲ್ಲಿ ಅಭಿಪ್ರಾಯಪಡಲಾಗಿದೆಯೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಇವರು ಅವಲಂಬಿಸಿದ್ದಾರೆ. ಸದರಿ ನಿರ್ಣಯದಿಂದ ಅವರು ಓದಿದ ಭಾಗವನ್ನು ಈ ಮುಂದಿನಂತೆ ಓದಲಾಗಿದೆ:

> *"ಮಾಲೀಕನು, ತಾನು ನಿಯೋಜಿಸಿದ ರೀತಿಯಲ್ಲಿ ಅವನ ಸೇವಕನು ನಿರ್ವಹಿಸುವ ಕೃತ್ಯದ ಸಂಬಂಧದಲ್ಲಿ ಅವನು ಪ್ರಾತಿನಿಧಿಕವಾಗಿ ಹೊಣೆಗಾರನಾಗುವನು. ನಿಯೋಜನೆಯ ರೀತಿಯಲ್ಲಿ ಕೃತ್ಯವು ನಡೆದಿದ್ದ ಹೊರತು, ಸೇವಕನ ಕೃತ್ಯವು ನಿಯೋಜಕನ ಹೊಣೆಯಾಗುವಂತೆ ಮಾಡಿರುವುದಿಲ್ಲ. ಮತ್ತೊಂದು ಕಡೆಯಲ್ಲಿ, ಮಾಲೀಕನ ಹೊಣೆಗಾರಿಕೆ ಉದ್ಭವಿಸಿದ ಸಂದರ್ಭದಲ್ಲಿ ಮಾಲೀಕನು ಅಧಿಕೃತಗೊಳಿಸಿದ ಕಾರ್ಯ ದೋಷಯುಕ್ತವಾಗಿರಬೇಕು ಅಥವಾ ಮಾಲೀಕನು ಅಧಿಕೃತಗೊಳಿಸಿದ ಕೆಲವು ಕಾರ್ಯವನ್ನು ಮಾಡುತ್ತಿರುವ ವಿಧಾನ ದೋಷಯುಕ್ತವಾಗಿರಬೇಕು ಮತ್ತು ಅನಧಿಕೃತವಾಗಿರಬೇಕು. ಮಾಲೀಕನ ಕೆಲಸಕ್ಕೆಂದು ಕಾರನ್ನು ತೆಗೆದುಕೊಳ್ಳುವ ಕಾರಿನ ಚಾಲಕನು ಅಪಘಾತವನ್ನು ಮಾಡಿದರೆ ಅವನು*

1. 1966 ಎಐಆರ್ 1697

*ಪ್ರಾತಿನಿಧಿಕವಾಗಿ ಆ ಕೃತ್ಯವನ್ನು ಮಾಡಿದಂತಾಗುತ್ತದೆ. ಆದರೆ, ಸೇವಕನು, ಅಪಘಾತದ ಸಮಯದಲ್ಲಿ, ಅವನ ನಿಯೋಜನೆಯಂತೆ ಮಾಡಿಲ್ಲದಿರುವ ಸಂದರ್ಭದಲ್ಲಿ, ತಾನೇ ಏನನ್ನಾದರೂ ಮಾಡಿದ್ದರೆ, ಮಾಲೀಕನು ಹೊಣೆಗಾರನಾಗುವುದಿಲ್ಲವೆಂಬುದು ಈಗಾಗಲೇ ಇತ್ಯರ್ಥವಾಗಿರುವುದಾಗಿದೆ. ಮಾಲೀಕನ ಕೆಲಸದ ಮೇಲೆ ಮತ್ತು ಅವನ ಅಧಿಕೃತ ಏಜೆಂಟನ ಮೂಲಕ ಅಥವಾ ಸೇವಕನ ಮೂಲಕ ವಾಹನವನ್ನು ನಡೆಸಲಾಗುತ್ತಿದೆಯೆಂಬ ಪೂರ್ವಭಾವನೆಯಿರುತ್ತದೆ. ಆದರೆ, ಪೂರ್ವಭಾವನೆಯನ್ನು ಹೋಗಲಾಡಿಸಬಹುದು. ಈ ಪ್ರಕರಣದಲ್ಲಿ ಇದು ನಕಾರಾತ್ಮಕವಾಗಿತ್ತು. ಏಕೆಂದರೆ, ಅನಧಿಕೃತ ವ್ಯಕ್ತಿಯು ವಾಹನವನ್ನು ಅವನ ಸ್ವಂತ ಕೆಲಸಕ್ಕೆ ನಡೆಸುತ್ತಿದ್ದನು. ವಾಸ್ತವವಾಗಿ, ಚಾಲಕನು ಅಥವಾ ಮಾಲೀಕನ ಏಜೆಂಟನು ಚಾಲಕನಾಗಿರಲಿಲ್ಲ ಆದರೆ ತನ್ನ ಸ್ವಂತ ಕೆಲಸಕ್ಕೆ ಕಾರನ್ನು ಪಡೆದುಕೊಂಡಿದ್ದವನು ಮಾಲೀಕನಿಂದ ಪಡೆದುಕೊಂಡಿರಲಿಲ್ಲ. ಮೊದಲ ನೋಟಕ್ಕೆ ಮಾಲೀಕನು ಅಂಥ ಸನ್ನಿವೇಶಗಳಲ್ಲಿ ಹೊಣೆಗಾರನಾಗುವುದಿಲ್ಲ.”*

7. ಎಂ.ಎಫ್.ಎ. ಸಂ.10685/2013ರಲ್ಲಿ ಮೊದಲ ಎದುರುದಾರ ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ಕೆ.ಟಿ. ಗುರುದೇವ ಪ್ರಸಾದ್‌ರವರು, ವಾಹನ ಕಳ್ಳತನವಾಗಿರುವ ಸಂದರ್ಭದಲ್ಲಿ ವಿಮಾಪತ್ರದ ನಿಬಂಧನೆಗಳನ್ನು ಉಲ್ಲಂಘನೆ ಮಾಡುವುದು ಸಂಗತವಲ್ಲವೆಂದು ನಿವೇದಿಸಿದ್ದಾರೆ. ತನ್ನ ನಿವೇದನೆಯನ್ನು ಸಮರ್ಥಿಸಲು, ***ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ –ವಿರುದ್ಧ– ನಿತಿನ್ ಖಂಡೇಲ್‌ವಾಲ್*** [2], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದಿಂದ ಶೀರ್ಷಿಕೆ ಟಿಪ್ಪಣಿಯನ್ನು ಇವರು ಓದಿದ್ದಾರೆ.

2. 2008 ಎಸಿಜೆ 2035

*"ಮೋಟಾರು ವಿಮೆ – ವಾಹನದ ಕಳ್ಳತನ – ವ್ಯಾಪಕ ವಿಮಾಪತ್ರ – ಜಕ್ಲೇಮಿನ ನಿರಾಕರಣೆ – ಯಾರೋ ಗೊತ್ತಿಲ್ಲದ ವ್ಯಕ್ತಿಗಳು ವಾಹನವನ್ನು ನಿಲ್ಲಿಸಿ, ಚಾಲಕನನ್ನು ಕಟ್ಟಿ ಹಾಕಿ ವಾಹನವನ್ನು ಕಸಿದುಕೊಂಡಿದ್ದಾರೆ ಇದು ಪತ್ತೆಯಾಗಿರುವುದಿಲ್ಲ – ವಿಮಾ ಕಂಪೆನಿಯು, ವಾಹನವನ್ನು ಖಾಸಗಿಯಾಗಿ ಬಳಸಲು ವಿಮೆ ನೀಡಲಾಗಿತ್ತೆಂದು ಆದರೆ ಇದನ್ನು ಪ್ರಯಾಣಿಕರನ್ನು ಕೊಂಡೊಯ್ಯಲು ಟ್ಯಾಕ್ಸಿಯಂತೆ ಬಳಸುತ್ತಿದ್ದರೆನ್ನುವ ಆಧಾರದ ಮೇಲೆ ಕ್ಲೇಮನ್ನು ನಿರಾಕರಿಸಿದೆ – ಮಾಲೀಕನು ಜಿಲ್ಲಾ ಗ್ರಾಹಕ ಸಂರಕ್ಷಣಾ ವೇದಿಕೆಯಲ್ಲಿ ದೂರನ್ನು ನೀಡಿದ್ದು ಮಾಲೀಕನು ವಿಮಾಪತ್ರದ ನಿಬಂಧನೆಗಳು ಹಾಗೂ ಷರತ್ತುಗಳನ್ನು ಉಲ್ಲಂಘಿಸಿದ್ದರಿಂದ ಕ್ಲೇಮನ್ನು ತಿರಸ್ಕರಿಸಿರುವುದನ್ನು ವಿಮಾ ಕಂಪೆನಿಯು ಸಮರ್ಥಿಸಿಕೊಂಡಿತ್ತೆಂದು ಈ ವೇದಿಕೆಯು, ಅಭಿಪ್ರಾಯಪಟ್ಟಿತ್ತು – ವಾಹನ ಕಳ್ಳತನವಾಗಿರುವುದನ್ನು ವಿಮಾ ಕಂಪೆನಿಯು ನಿರಾಕರಿಸಿಲ್ಲವೆಂಬುದನ್ನು ರಾಜ್ಯ ಆಯೋಗವು, ಗಮನಿಸಿದ್ದು, ಮೊತ್ತದಲ್ಲಿ ಶೇಕಡಾ 75ರಷ್ಟನ್ನು ಸಂದಾಯ ಮಾಡುವ ಮೂಲಕ ಮಾನಕೇತರ ಆಧಾರದ ಮೇಲೆ ಕ್ಲೇಮನ್ನು ಸರಿಪಡಿಸಬೇಕೆಂದು ನಿರ್ದೇಶಿಸಿತ್ತು – ರಾಷ್ಟ್ರೀಯ ಆಯೋಗವು ಆದೇಶವನ್ನು ಸ್ಥಿರೀಕರಿಸಿತ್ತು – ಅವನು ಸಮಗ್ರ ವಿಮಾ ಪತ್ರವನ್ನು ಪಡೆದುಕೊಂಡಿದ್ದಾಗ, ಆತನ ನಷ್ಟಕ್ಕೆ ವಿಮೆ ಮಾಡಲಾದ ಮೊತ್ತವನ್ನು ತುಂಬಿಕೊಡಲು ವಿಮಾ ಕಂಪೆನಿಯು, ಹೊಣೆಯಾಗುತ್ತದೆಯೇ – ವಾಹನವು ಕಳುವಾಗಿದ್ದ ಸಂದರ್ಭದಲ್ಲಿ ವಿಮಾಪತ್ರದ ನಿಬಂಧನೆಗಳ ಉಲ್ಲಂಘನೆಯಾಗಿದೆ ಎಂಬುದಕ್ಕೆ ಹೌದು: ಎಂದು ಅಭಿಪ್ರಾಯಪಡಲಾಗಿದೆ".*

8. ಇದಾದ ನಂತರ, ***ಶಶಿಧರನ್ ನಾಯರ್ –ವಿರುದ್ಧ– ಅಲಿ ಮತ್ತು ಇತರರು*** [3]**,** ಪ್ರಕರಣದಲ್ಲಿ ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಅವರು ನನ್ನ ಗಮನಕ್ಕೆ ತಂದಿದ್ದಾರೆ. ಮಾನ್ಯ ನ್ಯಾಯವಾದಿಗಳು ಓದಿದ ಮುಖ್ಯ ಶೀರ್ಷಿಕೆಯು ಈ ಮುಂದಿನಂತಿದೆ:

> *“ಮೋಟಾರು ವಾಹನಗಳ ಅಧಿನಿಯಮ, 1988ರ 147(1), 147(5) ಮತ್ತು 149 (1)ನೇ ಪ್ರಕರಣಗಳು – ಮೋಟಾರು ವಿಮೆ – ಕಳುವಾದ ವಾಹನ – ವಿಮಾ ಕಂಪೆನಿಯ ಹೊಣೆಗಾರಿಕೆ – ‘ಎ’ ಎಂಬ ವ್ಯಕ್ತಿಯು ಕಳುವಾದ ಮೋಟಾರು ಸೈಕಲ್ಲನ್ನು ಚಾಲನೆ ಮಾಡುತ್ತಿದ್ದು, ಅದು ಅಪಘಾತವಾಗಿದ್ದು, ಮತ್ತೊಬ್ಬ ಮೋಟಾರು ಸವಾರನಿಗೆ ಗಾಯಗಳಾಗಿವೆ – ಕಳುವಾಗಿದ್ದ ವಾಹನದ ವಿಮಾ ಕಂಪೆನಿಯು, ‘ಎ’ ಎಂಬುವನನ್ನು, ವಾಹನದ ಮಾಲೀಕನು ಅಧಿಕೃತಗೊಳಿಸಿಲ್ಲವೆಂಬ ವಿಮಾ ಕಂಪೆನಿಯು ನಷ್ಟವನ್ನು ತುಂಬಿಕೊಡಲು ಹೊಣೆಯಾದ ಮಾಲೀಕನ ಕಡೆಯಿಂದ ಪ್ರತಿನಿಧಿಸಲಾದ ಹೊಣೆಗಾರಿಕೆಯಿರುವುದಿಲ್ಲವೆಂಬ ವಾದದ ಮೇಲೆ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಕೋರಿಕೆ ಸಲ್ಲಿಸಿದೆ. ಕಳುವಾಗಿರುವ ವಾಹನವು, ಮಾಲೀಕನ ಅಭಿರಕ್ಷೆ ಅಥವಾ ನಿಯಂತ್ರಣದಲ್ಲಿ ಇರಲಿಲ್ಲವೆಂದು, ‘ಎ’ ಎಂಬ ವ್ಯಕ್ತಿಯು ಮಾಲೀಕನ ಸೇವಕ ಅಥವಾ ಮಾಲೀಕ ಅಧಿಕೃತಗೊಳಿಸಿದ ವ್ಯಕ್ತಿಯುಲ್ಲವೆಂದು, ಮಾಲೀಕನು ಹೊಣೆಗಾರ ನಾಗುವುದಿಲ್ಲವೆಂದು ವಿಮಾ ಕಂಪನಿ ದೋಷಮುಕ್ತವಾಗಿದೆ ಎಂದು ನ್ಯಾಯಾಧಿಕರಣವು ಸ್ಥಾಪಿಸಿದೆ – ಅಪಘಾತದ*

3. 2010 ಎಸಿಜೆ 1061

> *ಸಮಯದಲ್ಲಿ ವಾಹನಕ್ಕೆ ವಿಮೆ ಮಾಡಲಾಗಿತ್ತು ಮತ್ತು ವಿಮಾ ಕಂಪನಿಯು, ಮೂರನೇ ಪಕ್ಷಕಾರನಾಗಿರುವ ಬಾಧಿತ ವ್ಯಕ್ತಿಗೆ ಆಗಬಹುದಾದ ಅಪಾಯವನ್ನು ಭರಿಸಲು ಶಾಸನಬದ್ಧವಾಗಿ ಹೊಣೆಗಾರನಾಗಿದೆ - ವಾಹನದ ಕಳ್ಳತನ ಮತ್ತು ವಾಹನವನ್ನು ಕದ್ದಿದ್ದ ವ್ಯಕ್ತಿಯು ಅನಧಿಕೃತವಾಗಿ ಬಳಸುವುದನ್ನು, ವಿಮೆ ಪಡೆದವನು ಮಾಡಿದ ಉಲ್ಲಂಘನೆಯಾಗುತ್ತದೆಯೆಂದು ಹೇಳಲಾಗುವುದಿಲ್ಲ ಎಂಬುದಕ್ಕೆ, ಹೌದು, ಎಂದು ಅಭಿಪ್ರಾಯಪಟ್ಟಿದೆ; ವಿಮಾ ಕಂಪನಿಯು, ಮೋಟಾರು ಸೈಕಲ್ಲನ್ನು ನಡೆಸುತ್ತಿದ್ದ ವ್ಯಕ್ತಿಯಿಂದ ಮೊತ್ತವನ್ನು ವಸೂಲಿ ಮಾಡಲು ಸ್ವಾತಂತ್ರ್ಯವನ್ನು ಹೊಂದಿರುತ್ತದೆ".*

9. ***ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂ-ನಿಯಮಿತ -ವಿರುದ್ಧ- ಲೆಹ್ರು ಮತ್ತು ಇತರರು* [4],** ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಹ ಇವರು ಆಧರಿಸಿದ್ದಾರೆ. ಸದರಿ ನಿರ್ಣಯದ ಕಂಡಿಕೆ ಸಂ.18ನ್ನು ಈ ಮುಂದಿನಂತೆ ಓದಲಾಗಿದೆ:

> *"18. ಈಗ ನಾವು 149(2)ನೇ ಪ್ರಕರಣವನ್ನು ಪರಿಗಣಿಸೋಣ. 149(2)(ಎ)(ii)ನೇ ಪ್ರಕರಣವನ್ನು ಅವಲಂಬಿಸಲಾಗಿದೆ. ನೋಡಲಾದ ಹಾಗೆ, ಈ ಉಪಬಂಧದ ಮೇರೆಗೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ, 'ಉಲ್ಲಂಘನೆ' ಯಾಗಿದೆಯೆಂದು ತೋರಿಸಲೇಬೇಕು. ಸ್ಕಂದಿಯ ಮತ್ತು ಸೋಹನ್ ಲಾಲ್ ಪ್ಯಾಸಿ ಪ್ರಕರಣಗಳಲ್ಲಿ ಅಭಿಪ್ರಾಯಪಡಲಾದ ಹಾಗೆ, ಉಲ್ಲಂಘನೆಯು*

4. (2003)3 ಎಸ್‌ಸಿಸಿ 338

*ವಿಮಾದಾರನ ಕಡೆಯದಾಗಲೇಬೇಕು. ನಾವು ಅದನ್ನು ಸಂಪೂರ್ಣವಾಗಿ ಸಮ್ಮತಿಸುತ್ತೇವೆ. ಬೇರೆ ರೀತಿ ಭಾವಿಸಿದರೆ, ಅದು ಅಸಂಬದ್ಧ ಫಲಿತಾಂಶವಾಗುತ್ತದೆ. ಸಣ್ಣ ಉದಾಹರಣೆ ತೆಗೆದುಕೊಂಡರೆ, ವಾಹನವು ಕಳ್ಳತನವಾಗಿದೆಯೆಂದು ಭಾವಿಸಿಕೊಳ್ಳಬಹುದು. ಬಹಳ ದಿನಗಳಿಂದ, ಕಳ್ಳರು ಇದನ್ನು ಚಾಲನೆ ಮಾಡುತ್ತಿದ್ದು, ಅಪಘಾತವಾಗಿದೆ. ಕಳ್ಳನನ್ನು ಹಿಡಿದಿದ್ದು, ಅವನು ತಾನು ಪರವಾನಗಿಯನ್ನು ಹೊಂದಿರಲಿಲ್ಲವೆಂದು ಸ್ಪಷ್ಟಪಡಿಸಿದ್ದಾನೆ. ವಿಮಾ ಕಂಪನಿಯು ಹೊಣೆಗಾರಿಕೆಯನ್ನು ನಿರಾಕರಿಸಲು ಸಾಧ್ಯವೇ? ಎಂಬ ಪ್ರಶ್ನೆಗೆ 'ಇಲ್ಲ' ಎಂದು ಉತ್ತರವನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಬೇರೆ ರೀತಿಯಲ್ಲಿ ಹೇಳಲು ಹೋದರೆ ಕಡ್ಡಾಯ ವಿಮೆಯ ಉದ್ದೇಶವನ್ನು ಇಲ್ಲದಂತೆ ಮಾಡಿದಂತಾಗುತ್ತದೆ. ಬಾಧಿತರು ಅಥವಾ ಅಪಘಾತದಲ್ಲಿ ಸಾವನ್ನಪ್ಪಿದ ಸಂಬಂಧಿತರು ಮಾಲೀಕನು ಕಲ್ಪಿತನಾಗಿರುವುದರಿಂದ ಅವರಿಂದ ಪಡೆದುಕೊಂಡ ಡಿಕ್ರಿಯು, ಕಾಗದಪತ್ರದ ಡಿಕ್ರಿಯಾಗಿದ್ದಾರೆಂದು ಗುರುತಿಸಬಹುದು. ತನ್ನ ವಿವೇಚನೆಯಂತೆ ಕಾನೂನು ವಿಮೆಯನ್ನು ಮಾಡಲಾಗಿದೆಯೆಂಬ ಕಾರಣಕ್ಕಾಗಿ, ಕಡೇ ಪಕ್ಷ ಮೂರನೆ ಪಕ್ಷಕಾರನಿಗೆ ಕಡ್ಡಾಯವಾಗಿ ವಿಮೆ ಮಾಡಲಾಗಿದೆಯೆಂಬುದು ಶಾಸನದ ದೃಷ್ಟಿಕೋನವಾಗಿದೆ. ವಿಮಾ ಕಂಪೆನಿಯು ಸಂದಾಯ ಮಾಡುವ ಅವಕಾಶವಿರುತ್ತದೆ ಎಂಬುದು ಗುರಿ ಮತ್ತು ಉದ್ದೇಶವಾಗಿದೆ. ಕಂಪೆನಿಯ ವ್ಯವಹಾರ ವಿಮೆ ನೀಡುವುದಾಗಿದೆ. ಎಲ್ಲಾ ವ್ಯವಹಾರದಲ್ಲು ನಷ್ಟವೂ ಇರುತ್ತದೆ. ವ್ಯವಹಾರ ನಡೆಸುವ ಎಲ್ಲಾ ವ್ಯಕ್ತಿಗಳು ಆ ವ್ಯವಹಾರದಲ್ಲಿ ಸಂಬಂಧಪಟ್ಟ ನಷ್ಟವನ್ನು*

*ಅನುಭವಿಸಬೇಕಾಗುತ್ತದೆ. ಹಾಗೆಯೇ ವ್ಯವಹಾರವನ್ನು ಲಾಭ‍ಗೊಳಿಸುವುದಕ್ಕಾಗಿ ಮಾಡಿದರೂ ಸಹ ಅದಕ್ಕೆ ಸಂಬಂಧಿಸಿದ ಕೆಲವು ನಷ್ಟವನ್ನು ಎದುರಿಸಬೇಕಾಗುತ್ತದೆಯೆಂಬುದು ಒಪ್ಪುವಂಥದಾಗಿದೆ. ಇದೇ ಸಮಯದಲ್ಲಿ, ಮುಗ್ಧ ಪಕ್ಷಕಾರರು ಹಾನಿ ಅಥವಾ ನಷ್ಟವನ್ನುಂಟು ಮಾಡುವುದಿಲ್ಲ ಈ ವ್ಯವಸ್ಥೆಗಳು ಈ ಅಗತ್ಯತೆಗಳಾಗುತ್ತವೆ. ಹೀಗಾಗಿ ನಾವು ಒಪ್ಪಂದದಲ್ಲಿ, ಹಿಂದೆ ಹೇಳಲಾದ ಪ್ರಕರಣಗಳಲ್ಲಿ ಎಂದರೆ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಅಪಘಾತದ ಸಮಯದಲ್ಲಿ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಬಳಿ ಯುಕ್ತವಾದ ಚಾಲನಾ ಪರವಾನಗಿ ಇರಲಿಲ್ಲವೆಂದು ತೋರಿಸಲು ಇದು ಸಾಕಾಗುವುದಿಲ್ಲ. ವಿಮಾ ಕಂಪನಿಯು, ಉಲ್ಲಂಘನೆಯು ವಿಮಾದಾರನ ಕಡೆಯಿಂದ ಆಗಿತ್ತು ಎಂಬುದನ್ನು ರುಜುವಾತುಪಡಿಸಬೇಕು".*

10. ಅವರು, ವಿಮಾ ಕಂಪನಿಯು ಪ್ರಾ.ಸಾ.1 ಪಾಟೀ ಸವಾಲನ್ನು ಗಂಭೀರವಾಗಿ ಮಾಡಿಲ್ಲವೆಂದು ನಿವೇದಿಸಿದ್ದಾರೆ.

11. ಎರಡನೇ ಎದುರುದಾರ ಮಾಲೀಕನ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ಜೆ. ಪ್ರಮೋದ್‌ರವರು, ವಿಮಾ ಕಂಪನಿಯು (ನಿಶಾನೆ. ಆರ್.7) ಮೂರನೇ ಪಕ್ಷಕಾರರ ನಷ್ಟವನ್ನು ವ್ಯಾಪಕವಾಗಿ ತುಂಬಿಕೊಟ್ಟಿರುವುದನ್ನು ನಿವೇದಿಸಿದ್ದಾರೆ. ಆದುದರಿಂದ ಇವರು, ವಿಮಾ ಕಂಪೆನಿಯು, ಐತೀರ್ಪನ್ನು ಒಪ್ಪಿಕೊಳ್ಳಲು ಹೊಣೆಯಾಗಿದೆಯೆಂದು ವಾದಿಸಿರುವರು. ಇವರು, ***ಲೆಹ್ರು (ಮೇಲಿನ)*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಇದರನುಸಾರ ವಿಲೆ ಮಾಡಿದ್ದ ಎಂ.ಎಫ್.ಎ. ಸಂ.8746/2004ರಲ್ಲಿ ಹೊರಡಿಸಲಾದ ದಿನಾಂಕ 26.7.2011ರ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಸಹ ಆಧರಿಸಿದ್ದಾರೆ.

12. ವರದಿ ಮಾಡಲಾದ ಮತ್ತು ಪ್ರಸ್ತುತ ಪ್ರಕರಣದ ಸಂಗತಿಗಳು ಸಂಪೂರ್ಣವಾಗಿ ಭಿನ್ನವಾಗಿವೆಯೆಂದು ಶ್ರೀ ಮಹೇಶ್‌ರವರು ಪ್ರತ್ಯುತ್ತರವಾಗಿ ನಿವೇದಿಸಿದ್ದಾರೆ. ಇವರು, ***ನಿತಿನ್ ಖಂಡೇಲ್‌ವಾಲ್ (ಮೇಲಿನ)*** ಪ್ರಕರಣದಲ್ಲಿನ ತೀರ್ಮಾನವು, ಗ್ರಾಹಕರ ಸಂರಕ್ಷಣಾ ಅಧಿನಿಯಮ, 1986ರ ಅಡಿಯಲ್ಲಿ ಬರುತ್ತದೆಯೆಂದು ನಿವೇದಿಸಿದ್ದಾರೆ. ಕ್ಲೇಮುದಾರರು ಆಧರಿಸಿದ ವರದಿ ಮಾಡಲಾದ ಇತರ ಎರಡು ತೀರ್ಮಾನಗಳಲ್ಲಿ ಯಾವುದೇ ಸಾಕ್ಷ್ಯವಿರುವುದಿಲ್ಲ. ಆದರೆ ಪ್ರಸ್ತುತ ಪ್ರಕರಣದಲ್ಲಿ ವಿವರವಾದ ಸಾಕ್ಷ್ಯವು ದಾಖಲೆಯಲ್ಲಿದ್ದು ಇದು ಮಾಲೀಕನಾಗಲಿ ಅಥವಾ ವಿಮಾ ಕಂಪನಿಯಾಗಲಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಗಾರನಾಗುವುದಿಲ್ಲವೆಂದು ವಾದಿಸುವಲ್ಲಿ ವಿಮಾ ಕಂಪನಿಯ ರಕ್ಷಣೆಗೆ ಬಂದಿದೆಯೆಂದು ನಿವೇದಿಸಿದ್ದಾರೆ.

13. ಕ್ಲೇಮುದಾರ – ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ಕೆ.ಟಿ. ಗುರುದೇವ ಪ್ರಸಾದ್ ರವರು ಎಂ.ಎಫ್.ಎ.ಸಂ. 878/2014ರಲ್ಲಿ, ಕ್ಲೇಮುದಾರನ ಆದಾಯುವನ್ನು ಪ್ರತೀ ತಿಂಗಳಿಗೆ 4,500/–ರೂ. ಎಂದು ತೆಗೆದುಕೊಳ್ಳುವಲ್ಲಿ ನ್ಯಾಯಾಧಿಕರಣವು ತಪ್ಪೆಸಗಿದೆಯೆಂದು ನಿವೇದಿಸಿದ್ದಾರೆ. ಅವನ ಆದಾಯುವನ್ನು ಕಡೇ ಪಕ್ಷ ತಿಂಗಳಿಗೆ 5,500/– ಎಂದು ತೆಗೆದುಕೊಳ್ಳಲೇಬೇಕಾಗುತ್ತದೆ.

14. ವಿವಿಧ ಶೀರ್ಷಿಕೆಗಳ ಮೇರೆಗೆ ನೀಡಲಾದ ಮೊತ್ತವು ನ್ಯಾಯಯುತ ಮತ್ತು ಯುಕ್ತವಾಗಿದೆಯೆಂದು ಶ್ರೀ ಮಹೇಶ್‌ರವರು ನಿವೇದಿಸಿದ್ದಾರೆ.

15. ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು, ನನ್ನ ಆಲೋಚನೆಯ ರೀತಿಯಲ್ಲಿ ಸ್ವೀಕರಿಸಿರುತ್ತೇನೆ. ನನ್ನ ಪರಿಗಣನೆಗೆ ಈ ಮುಂದಿನ ಪ್ರಶ್ನೆಗಳು ಬಂದಿರುತ್ತವೆ:

(i) ಮಾಲೀಕ ಮತ್ತು ವಿಮಾ ಕಂಪನಿಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಕ್ಲೇಮುದಾರನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಯಾಗಿದೆಯೆಂದು ನ್ಯಾಯಾಧಿಕರಣವು ಅಭಿಪ್ರಾಯಪಟ್ಟಿರುವುದು ಸಮರ್ಥನೀಯವಾಗಿದೆಯೇ?

(ii) ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ನ್ಯಾಯಾಧಿಕರಣವು ನೀಡಿದ ಮೊತ್ತವು ನ್ಯಾಯಸಮ್ಮತ ಮತ್ತು ಯುಕ್ತವಾಗಿದೆಯೇ?

**ಮರುಪ್ರಶ್ನೆ ಸಂಖ್ಯೆ (i) ರಲ್ಲಿ:**

16. ಪ್ರಕರಣದ ಸಂಗತಿಗಳಲ್ಲಿ ಯಾವುದೇ ವಿವಾದವಿಲ್ಲ. ಎಲ್ಲಾ ಅಪಘಾತ ನಡೆದ ಮುಖ್ಯ ಘಳಿಗೆಯಲ್ಲಿ ಮೂರು ಜನ ಪಕ್ಷಕಾರರ ವಾದ ಮೋಟಾರು ವಾಹನವು ಕಳ್ಳನ ಅಭಿರಕ್ಷೆಯಲ್ಲಿತ್ತೆಂಬುದಾಗಿದೆ. ಅಲ್ಲದೆ, ಅವನು ಅಜಾಗರೂಕ ಮತ್ತು ಅತೀವೇಗವಾಗಿ ಮೋಟಾರು ವಾಹನವನ್ನು ನಡೆಸುತ್ತಿದ್ದನೆಂಬುದರಲ್ಲಿ ಯಾವುದೇ ವಿವಾದವಿಲ್ಲ. ಅವನು ಎಲ್ಲಿರುವನೆಂದು ಅವರೇ ಪತ್ತೆಹಚ್ಚದ್ದರಿಂದ, ಅವನು ಚಾಲನಾ ಪರವಾನಗಿಯನ್ನು ಹೊಂದಿದ್ದನೇ ಅಥವಾ ಹೊಂದಿರಲಿಲ್ಲವೇ ಎಂಬುದು ಸಹ ಅಸ್ಪಷ್ಟವಾಗಿ ಉಳಿದಿದೆ.

17. ಮಾಲೀಕನು ಪರವಾನಗಿ ಇಲ್ಲದ ವ್ಯಕ್ತಿಯು ವಾಹನ ನಡೆಸಲು ಕೊಟ್ಟಿದ್ದನೆಂಬುದು ಯಾರ ವಾದವೂ ಆಗಿಲ್ಲ. ಕಳ್ಳನು ವಾಹನವನ್ನು ಎತ್ತಿಕೊಂಡು ಹೋದ ಮೇಲೆ, ಮಾಲೀಕನು ಕೂಡಲೇ ಪೊಲೀಸರಿಗೆ ಪ್ರಾಮಾಣಿಕವಾಗಿ ದೂರು ಕೊಟ್ಟಿದ್ದಾನೆ. ಮಾಲೀಕನು, ವಿಮಾ ಪಾಲಿಸಿಯ (ನಿಶಾನೆ.ಆರ್7) ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿಲ್ಲ. ***ನಿತಿನ್ ಖಂಡೇಲ್‌ವಾಲ್ (ಮೇಲಿನ)*** ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು, ವಾಹನ ಕಳ್ಳತನವಾದ ಸಂದರ್ಭದಲ್ಲಿ ಆದ ವಿಮೆಯ

ನಿಬಂಧನೆಗಳ ಉಲ್ಲಂಘನೆಯು ಪ್ರಸ್ತುತವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಕಳ್ಳತನದ ಕಾರಣದಿಂದ ವಾಹನ ನಷ್ಟವಾದ ಸಂದರ್ಭದಲ್ಲಿ ಕ್ಲೇಮನ್ನು ವಿಮಾ ಕಂಪೆನಿಯು ನಿರಾಕರಿಸಲು ಸಾಧ್ಯವಿಲ್ಲ. ವಿಮಾದಾರನಿಗೆ ಆಗುವ ನಷ್ಟದ ಸಂಬಂಧದಲ್ಲಿ ವಿಮಾದಾರನು ಸರಿಯಾದ ವಿಮಾಪತ್ರವನ್ನು ಪಡೆದುಕೊಂಡಿದ್ದಲ್ಲಿ ವಾಹನ ಮಾಲೀಕನಿಗೆ ಅಪೀಲುದಾರ ವಿಮಾ ಕಂಪೆನಿಯು, ನಷ್ಟಭರ್ತಿಯನ್ನು ತುಂಬಿಕೊಡಲು ಹೊಣೆಯಾಗಿರುತ್ತದೆ.

18. ***ಶಶಿಧರನ್ ನಾಯರ್ (ಮೇಲಿನ)*** ಪ್ರಕರಣದಲ್ಲಿ, ವಿಮಾ ಕಂಪೆನಿಯು, ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ವಾಹನ ಕಳ್ಳತನವಾಗಿತ್ತೆಂದು ಹಾಗೂ ವಾಹನವನ್ನು ಚಾಲನೆ ಮಾಡಲು ಅಧಿಕೃತಗೊಳಿಸದ ಯಾರೋ ಒಬ್ಬರು ಇದನ್ನು ಚಾಲನೆ ಮಾಡುತ್ತಿದ್ದರೆಂಬ ವಾದದ ಆಧಾರದ ಮೇಲೆ ಕೋರಿಕೆ ಸಲ್ಲಿಸಿತ್ತು. ಕೇರಳ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ವಾಹನದ ಕಳ್ಳತನ ಮತ್ತು ಅದನ್ನು ಕಳ್ಳರು ಅನಧಿಕೃತವಾಗಿ ಬಳಸುವುದನ್ನು ವಿಮಾದಾರನು ಮಾಡಿದ ಉಲ್ಲಂಘನೆಯೆಂದು ಪರಿಭಾವಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿದೆ; ವಿಮಾ ಕಂಪನಿಗೆ ಮೋಟಾರು ಸೈಕಲ್ಲನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿಯಿಂದ ಮೊತ್ತವನ್ನು ವಸೂಲಿ ಮಾಡುವ ಸ್ವಾತಂತ್ರ್ಯವಿರುತ್ತದೆ. ವಿಮಾಗಾರನು ತಪ್ಪು ಮಾಡದಿದ್ದಾಗ ಮತ್ತು ವಾಗ್ದಾನವನ್ನು ಉಲ್ಲಂಘಿಸಿದ ತಪ್ಪು ನಡೆಯದಿದ್ದಾಗ ಮೂರನೇ ವ್ಯಕ್ತಿಯ ಹೆಸರಿನಲ್ಲಿ ಐತೀರ್ಪನ್ನು ನೀಡುವ ಹೊಣೆಗಾರಿಕೆಯಿಂದ ವಿಮಾಗಾರನಿಗೆ ವಿನಾಯಿತಿ ನೀಡಲಾಗುವುದಿಲ್ಲ.

19. ***ಲೆಹ್ರು (ಮೇಲಿನ)*** ಪ್ರಕರಣದಲ್ಲಿ, ನಷ್ಟವು ಯಾರೋ ಒಬ್ಬರಿಗೆ ಬಂದರೆ ಆಗ ವಿಮಾಗಾರನು ಈ ಕೆಲಸವನ್ನು ಮಾಡಿರುವುದರಿಂದ ವಿಮಾಗಾರನ ಮೇಲೆ ಇದು ಬರಬೇಕು. ಕಂಪನಿಯ ಕೆಲಸ ವಿಮೆ ಮಾಡುವುದಾಗಿದೆ. ಎಲ್ಲಾ ವ್ಯವಹಾರಗಳಲ್ಲಿ ನಷ್ಟದ ಅಂಶವಿರುತ್ತದೆ. ಸದರಿ ಅಧಿನಿಯಮದ 149(2)(ಎ)(ii)ನೇ ಪ್ರಕರಣದ ಮೇರೆಗಿನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ವಿಮಾದಾರನ ಕಡೆಯಿಂದ ನಿಯಮದ ಉಲ್ಲಂಘನೆಯಾಗಿತ್ತೆಂದು ತೋರಿಸಲೇಬೇಕಾಗುತ್ತದೆ. ಬೇರೆ ರೀತಿಯಲ್ಲಿ

ಹೇಳುವುದಾದರೆ ಅದರ ಫಲಿತಾಂಶ ಅಸಂಬದ್ಧವಾಗುತ್ತದೆ. ಮೂರನೇ ಪಕ್ಷಕಾರನ ನಷ್ಟಕ್ಕೆ ಸಂಬಂಧಿಸಿದ ಉಪಬಂಧದ ಗುರಿ ಮತ್ತು ಉದ್ದೇಶವು, ವಿಮಾ ಕಂಪೆನಿಯು, ನಷ್ಟಪರಿಹಾರವನ್ನು ಸಂದಾಯ ಮಾಡಲು ಅವಕಾಶ ಕಲ್ಪಿಸುವುದಾಗಿದೆ.

20. ***ಸ್ಕ್ಯಾಂಡಿಯಾ ಇನ್ಸುರೆನ್ಸ್ ಕಂಪನಿ ನಿಯಮಿತ –ವಿರುದ್ಧ– ಕೋಕಿಲಾಬೆನ್ ಚಂದ್ರವದನ್ ಮತ್ತು ಇತರರು*** [5]**,** ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಪರಾಮರ್ಶಿಸುವುದರಿಂದಲೂ ಸಹ ಪ್ರಯೋಜನವಾಗುತ್ತದೆ. ಸದರಿ ನಿರ್ಣಯದ ಸಂಬಂಧಪಟ್ಟ ಭಾಗಗಳನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

> *"14. . . . . . . . . . ಇದು ವಿನಾಯಿತಿಯ ಷರತ್ತುಗಳನ್ನು ಪರಿಭಾಷಿಸುವ ಶಾಸನಬದ್ಧ ಉಪಬಂಧವಾಗಿದ್ದು, ಇದರ ಅರ್ಥ ವಿವರಣೆಯನ್ನು ನೀಡುತ್ತಿದೆ. ಇವು, ತಮ್ಮ ಆಶಯವನ್ನು ತಿಳಿಸುತ್ತಿದ್ದು, ಇದರಲ್ಲಿ ತನ್ನ ಜೀವನದ ಗುರಿಯನ್ನು ಮುಟ್ಟುವುದಕ್ಕಿಂತಲೂ ಉಪಬಂಧವನ್ನು ವಿಫಲಗೊಳಿಸಲು ಮಾಡಿರುವ ಅರ್ಥ ವ್ಯಾಖ್ಯಾನವನ್ನು ಹಿಂದೆ ತಿರುಗಿ ನೋಡುವ ಮೂಲಕ ಸಂರಕ್ಷಣೆಯುನ್ನು ಅನೂರ್ಜಿತಗೊಳಿಸುವುದನ್ನು ದೃಢಪಡಿಸಲು ಕಾತರಗೊಂಡಿರುವುದರೊಟ್ಟಿಗೆ ಇದನ್ನು ಅಧಿನಿಯಮಿತಿಗೊಳಿಸಲಾಗಿದೆ. ಇತರ ರೀತಿಯಲ್ಲಿ ಹೇಳುವುದಾದರೆ, ಸಹಾಯಾರ್ಥವಾಗುವ ಉಪಬಂಧವನ್ನು ಅಪಕಾರ ಮಾಡುವ ಕಣ್ಣಿನಿಂದ ಓದುವ ಮೂಲಕ ಇದನ್ನು ಅನೂರ್ಜಿತಗೊಳಿಸಲು ಕಾರಣವಾಗುತ್ತದೆ ಮತ್ತು ಸಾಧಿಸಬೇಕಾದ ನಿಜವಾದ ಗುರಿಗಳನ್ನು ತಿಳಿಸದ ಕಾನೂನಿನ ಉದ್ದೇಶ ಮತ್ತು ತತ್ವವನ್ನು ಪಾಲಿಸದ ಮನಸ್ಸನ್ನು ಇದು ಒಳಗೊಳ್ಳುತ್ತದೆ . . . . . ."*

5. (1987) 2 ಎಸ್‌ಸಿಸಿ 654

21. ಸರ್ವೋಚ್ಚ ನ್ಯಾಯಾಲಯದ ಹಿಂದೆ ಹೇಳಲಾದ ನಿರ್ಣಯಗಳಲ್ಲಿ ವಿಧಿಸಲಾದ ಪ್ರಮಾಣಗಳನ್ನು ಅನುಸರಿಸಿ, ಮಾಲೀಕ ಮತ್ತು ವಿಮಾ ಕಂಪನಿಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ನಷ್ಟಪರಿಹಾರವನ್ನು ಸಂದಾಯ ಮಾಡಲು ಹೊಣೆಯಾಗಿವೆಯೆಂದು ಅಭಿಪ್ರಾಯಪಟ್ಟಿರುವುದನ್ನು ನ್ಯಾಯಾಧಿಕರಣವು ಸಂಪೂರ್ಣವಾಗಿ ಸಮರ್ಥಿಸಿಕೊಂಡಿರುವುದನ್ನು ಜಾರಿಗೆ ತರಬೇಕೆಂದು ನಾನು ಮೊದಲ ಪ್ರಶ್ನೆಗೆ ಉತ್ತರ ನೀಡಿರುತ್ತೇನೆ. ವಿಮಾ ಕಂಪನಿಯು, ಅಪಘಾತಕ್ಕೆ ಕಾರಣವಾಗಿರುವ ವ್ಯಕ್ತಿಯಿಂದ ಮೊತ್ತವನ್ನು ವಸೂಲಿ ಮಾಡುವ ಸ್ವಾತಂತ್ರ್ಯವನ್ನು ಹೊಂದಿದೆಯೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ.

22. ಇದರ ಪರಿಣಾಮವಾಗಿ, ಇಲ್ಲಿ ಮೇಲೆ ಇರಿಸಲಾದ ಸ್ವಾತಂತ್ರ್ಯವನ್ನು ಮೀಸಲಿರಿಸಿ ಎಂ.ಎಫ್.ಎ.ಸಂ.10685/2013ನ್ನು ವಜಾಗೊಳಿಸಿದ್ದೇನೆ.

**ಮರು ಪ್ರಶ್ನೆ ಸಂ.(ii) ರಲ್ಲಿ:**

23. ಈಗ ನಾನು ಕ್ಲೇಮುದಾರರ ಅಪೀಲಿನ ಪರಿಶೀಲನೆಯಿಂದ ಹೊರಬಿದ್ದಿದ್ದೇನೆ. ನಷ್ಟಪರಿಹಾರವನ್ನು ಹೆಚ್ಚಿಸುವ ಸಂಬಂಧ ಎಂ.ಎಫ್.ಎ.ಸಂ.878/ 2014. ಒಪ್ಪಿಕೊಂಡಿರುವ ಹಾಗೆ, ಕ್ಲೇಮುದಾರನು ಹಾಲು ಮಾರುವ ಕೆಲಸವನ್ನು ಮಾಡುತ್ತಿದ್ದಾನೆ. ಅವನು ಎಡಗಾಲಿನ ಎರಡೂ ಮೂಳೆಗಳ (ಟಿಬಿಯ ಮತ್ತು ಫಿಬುಲಾ) ಮುರಿತದಿಂದ ನೋವನ್ನನುಭವಿಸಿದ್ದಾನೆ. ಡಾ॥ ಬಿ.ಆರ್. ವೆಂಕಟೇಶಯ್ಯನು (ಪ್ರಾ.ಸಾ.2) ಮೂಳೆಗಳು ಒಟ್ಟಿಗೆ ಮುರಿದುಹೋಗಿವೆಯೆಂದು ಮತ್ತು ಕ್ಲೇಮುದಾರನು ಗರಿಷ್ಠ ಪೂರ್ವಸ್ಥಿತಿಗೆ ಬಂದಿದ್ದಾನೆಂದು ಮತ್ತು ಅವನ ಶಕ್ತಿಹೀನತೆಯನ್ನು ಸ್ವಲ್ಪ ಸರಿಪಡಿಸಲಾಗಿದೆಯೆಂಬುದನ್ನು ಒಪ್ಪಿಕೊಂಡಿದ್ದಾರೆ. ಅವರು ಮತ್ತೆ, ಅವನ ಕಾಲು 1/2 ಸೆಂ.ಮೀ.ನಷ್ಟು ಕುಬ್ಜವಾಗಿದ್ದು, ಇದನ್ನು ಅಲಕ್ಷಿಸಬಹುದೆಂದು ತಿಳಿಸಿದ್ದಾರೆ. ಶೂಗಳನ್ನು ಧರಿಸಿಕೊಂಡು ಇದನ್ನು ಸರಿಪಡಿಸಿಕೊಳ್ಳಬಹುದೆಂಬುದು ಇವರ ಅಭಿಪ್ರಾಯ. ವೈದ್ಯರು ಮಾಡಿದ ಈ ದಾಖಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವನು ಹಾಲು ಮಾರುವ ವ್ಯಾಪಾರದ ಹಾದಿಯಲ್ಲಿ ಆಗುವ ಯಾವುದೇ ಶಾಶ್ವತ

ದೈಹಿಕ ನ್ಯೂನತೆಯಿಂದ ಬಳಲಿದ್ದಾನೆಂಬುದನ್ನು ನಂಬಲು ಕಷ್ಟವಾಗುತ್ತಿದೆ. ಈ ಸ್ವರೂಪದ ಪ್ರಕರಣದಲ್ಲಿ ಭವಿಷ್ಯದ ಆದಾಯದ ನಷ್ಟಕ್ಕೆ ಸಂಬಂಧಿಸಿದಂಥ ಮೊತ್ತವನ್ನು ನೀಡುವುದು ಅಪೇಕ್ಷಣೀಯವಲ್ಲ. ಕಡೆಯದಾಗಿ ಕೆಲವು ವಾಸ್ತವಿಕ ಮೊತ್ತವನ್ನು, ತಾತ್ಕಾಲಿಕವಾಗಿ ಮತ್ತು ಸಣ್ಣ ನ್ಯೂನತೆ ಸಂಬಂಧದಲ್ಲಿ ನೀಡಬಹುದು. ಆದಾಯದ ನಷ್ಟದ ಸಂಬಂಧದಲ್ಲಿ ನ್ಯಾಯಾಧಿಕರಣವು ನೀಡಿರುವ ಸುಮಾರು 43,000/– ರೂ.ಗಳನ್ನು ತಾತ್ಕಾಲಿಕ ಮತ್ತು ಸಣ್ಣ ನ್ಯೂನತೆಯು ಸಂಬಂಧದಲ್ಲಿ ನೀಡಲಾದ ಮೊತ್ತವೆಂದು ತೆಗೆದುಕೊಳ್ಳಬಹುದು. ಇತರ ಶೀರ್ಷಿಕೆಗಳ ಅಡಿಯಲ್ಲಿ ನ್ಯಾಯಾಧಿಕರಣವು ನೀಡಿದ ಮೊತ್ತವು ಯುಕ್ತವಾಗಿದೆ ಮತ್ತು ವಾಸ್ತವಿಕವಾಗಿದೆಯೆಂದು ಗುರುತಿಸಲಾಗಿದೆ. ಆದುದರಿಂದ ನಾನು ಎಂ.ಎಫ್.ಎ.ಸಂಖ್ಯೆ 878/2014ನ್ನು ವಜಾಗೊಳಿಸಿರುತ್ತೇನೆ.

24. ಈ ನ್ಯಾಯಾಲಯದಲ್ಲಿ ವಿಮಾ ಕಂಪನಿಯು ಠೇವಣಿ ಮಾಡಿದ ಮೊತ್ತವನ್ನು, ಕಾನೂನಿಗನುಸಾರವಾಗಿ ಕ್ಲೇಮುದಾರನಿಗೆ ಬಟವಾಡೆ ಮಾಡುವ ಸಂಬಂಧದಲ್ಲಿ ನ್ಯಾಯಾಧಿಕರಣಕ್ಕೆ ವರ್ಗಾಯಿಸಬೇಕೆಂದು ಆದೇಶಿಸಲಾಗಿದೆ.